ಮೂಲ ದಾವಾ ಸಂಖ್ಯೆ. 127/2017 ಡಿ ಡಬ್ಲ್ಯೂ 4

(ದಿನಾಂಕ 21-11-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣಿಕರಿಸಲಾಯಿತು.)

ಪಾಟೀ ಸವಾಲುಃ ವಾದಿ ಪರ ಶ್ರೀ ಹೆಚ್ ಎಂ ವಕೀಲರಿಂದಃ-

ನಾನು ನನ್ನ ಮುಖ್ಯ ವಿಚಾರಣಾ ಸಾಕ್ಷ್ಯದ ಕುರಿತು ನ್ಯಾಯಾಲಯದ ಮುಂದೆ ನನ್ನ ಸಾಕ್ಷಿ ಪ್ರಮಾಣಪತ್ರವನ್ನು ಸಲ್ಲಿಸಿದ್ದು ಇರುತ್ತದೆ. ಅದರಲ್ಲಿರುವ ಸಂಗತಿಗಳು ಸತ್ಯವಾಗಿದ್ದು ಅದಕ್ಕೆ ನಾನೇ ಸಹಿ ಮಾಡಿದ್ದೇನೆ.

ನಾನು 3 ನೇ ತರಗತಿಯವರೆಗೆ ವ್ಯಾಸಾಂಗ ಮಾಡಿದ್ದೇನೆ. ನನಗೆ ಈ ದಿನ ನ್ಯಾಯಾಲಯಕ್ಕೆ 1 ನೇ ಪ್ರತಿವಾದಿ ಕರೆದುಕೊಂಡು ಬಂದಿದಾನೆ. ಈ ದಾವೆಯನ್ನು ಕೊಟ್ರಪ್ಪ ಇವರು ಕಡ್ಲೆಪ್ಪ ಇವರ ವಿರುದ್ಧ ದಾಖಲಿಸಿದ್ದಾನೆ. ದಾವಾ ಆಸ್ತಿಯು ಚಿಲುಗೋಡು ಗ್ರಾಮದಲ್ಲಿದೆ. ದಾವಾ ಆಸ್ತಿಯ ಸರ್ವೆ ನಂ 107 ಸಿ, ಅದರ ವಿಸ್ತೀರ್ಣ 3.40 ಎಕರೆ ಇದೆ. ಸದರಿ ಆಸ್ತಿಯು ಮೂಲತಹ ಹುಗ್ಗಣ್ಣವರ ಹುಲುಗಪ್ಪ ಇವರದ್ದು ಅಂತಾ ನಾನು ತಿಳಿದುಕೊಂಡಿದ್ದೇನೆ. ಅದನ್ನು ಕೊಟ್ರಪ್ಪ ಹೇಳಿರುತ್ತಾನೆ. ಅದನ್ನು ಅವರು ಸುಮಾರು 15 ವರ್ಷದ ಹಿಂದೆಯೇ ನನಗೆ ಹೇಳಿರುತ್ತಾರೆ. ದಾವಾ ಆಸ್ತಿಯ ಚೆಕ್ ಬಂದಿ ಪೂರ್ವಕ್ಕೆ ವಾರದ ಕೊಟ್ರೇಶ ಇವರ ಜಮೀನು, ಪಶ್ಚಿಮಕ್ಕೆ ಹುಗ್ಗಣ್ಣವರ ಕೊಟ್ರೇಶ ಇವರ ಜಮೀನು, ಉತ್ತರಕ್ಕೆ ಹುಗ್ಗಣ್ಣವರ ರಾಜಪ್ಪ ಇವರ ಜಮೀನು, ದಕ್ಷಿಣಕ್ಕೆ ವಾರದ ರಾಜಪ್ಪ ಇವರ ಜಮೀನು ಇರುತ್ತದೆ. ದಾವಾ ಸರ್ವೆ ನಂ 107 ಸಿ ಇದು ಒಟ್ಟು ವಿಸ್ತೀರ್ಣ 6.80 ಎಕರೆ ಇದೆ ಎಂದರೆ ಸರಿ. ವಾದಿ ಸಾವಂತ್ರವ್ವ ಇವರ ವಾರಸುದಾರರನ್ನು ನಾನು ನೋಡಿಲ್ಲ. ಹುಗ್ಗಣ್ಣವರ ಹುಲುಗಪ್ಪರ ಹೆಂಡತಿ ಕರಿಯಮ್ಮ ಹಾಗೂ ಹುಲುಗಪ್ಪರ ಸಹೋದರ ನಾಗಪ್ಪ ಹಾಗೂ ಅವರ ಕಾಸಾ ಅಳಿಯ ಹಾಗೂ ಭರಮವ್ವ ಇವರು ಸೇರಿ ಹೊಳಗುಂದಿ ಕೊಟ್ರೇಶ ಇವರಿಗೆ 1991 ರಲ್ಲಿ ಹಕ್ಕು ಬಿಡುಗಡೆ ಪತ್ರದ ಮೂಲಕ ಹಕ್ಕು ನೀಡಿದ್ದು ಇದೆ ಅಂತಾ ತನ್ನ ಸಾಕ್ಷ್ಯ ಪ್ರಮಾಣ ಪತ್ರದಲ್ಲಿ ಬರೆಸಿದ್ದು ಆ ಸಮಯದಲ್ಲಿ ನಾನು ಹಾಜರು ಇರಲಿಲ್ಲ. ಸದರಿ ಹಕ್ಕು ಬಿಡುಗಡೆ ಪತ್ರದ ಸ್ವರೂಪ ನನಗೆ ಗೊತ್ತಿಲ್ಲ. ಸದರಿ ಆಸ್ತಿಯಲ್ಲಿ ಸಾವಂತ್ರವ್ವ ಇವರು ಸ್ವಾದೀನದಲ್ಲಿರುತ್ತಾರೆ ಅಂದರೆ ಇರಬಹುದು ಆದರೆ ಅದು ನನಗೆ ಗೊತ್ತಿಲ್ಲ. ಪ್ರಸ್ತುತ ದಾವೆಯ ವಿಚಾರಣೆಯ ಸಮಯದಲ್ಲಿ 1 ನೇ ಪ್ರತಿವಾದಿಯು 2 ನೇ ಪ್ರತಿವಾದಿಯ ಹೆಸರಿಗೆ ದಾವಾ ಆಸ್ತಿಯ ಕುರಿತು ದಾನ ಪತ್ರ ಬರೆದು ಕೊಟ್ಟಿರುತ್ತಾರೆ ಎಂದರೆ ಸರಿ . ಈಗಲೂ ಸಹ ದಾವಾ ಆಸ್ತಿಯಲಿ ವಾದಿ ಸ್ವಾಧೀನದಲ್ಲಿ ಇರುತ್ತಾರೆ ಎಂದರೆ ಇರಬಹುದು ನನಗ ಗೊತ್ತಿಲ್ಲ. ದಾವಾ ಸರ್ವೆ ನಂ 107 ಸಿ ಪಕ್ಕದಲ್ಲಿ ನನ್ನ ಜಮೀನು ಇದೆ. ನನ್ನ ಜಮೀನು ಸರ್ವೆ ನಂ 186 ಎ

ಇರುತ್ತದೆ. ದಾವಾ ಸರ್ವೆ ನಂ 107 ಸಿ ದಕ್ಷಿಣ ದಿಕ್ಕಿಗೆ ನನ್ನ ಜಮೀನು ಬರುತ್ತದೆ. ಪ್ರತಿವಾದಿಯರು ಮತ್ತು ನಾವು ಬಹಳ ವಿಶ್ವಾಸಿತವಾಗಿರುತ್ತವೆ ಎಂದರೆ ಸಾಕ್ಷಿಯು ನಾವು ಅಣ್ಣ ತಮ್ಮಂದಿರ ಹಾಗೆ ಇರುತ್ತೇವೆ ಎನ್ನುತ್ತಾರೆ. ಆ ಕಾರಣಕ್ಕಾಗಿ ಈ ದಾವೆಯ ವಿಚಾರ ನನಗೆ ಏನು ಗೊತ್ತಿಲ್ಲದಿದ್ದರು ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಲಾಯಿತು.)

ಓ. ಹೇ. ಕೇ. ಸರಿ ಇದೆ,

ಸಿವಿಲ್ ಜಡ್ಜ ಮತ್ತು ಜೆ ಎಂ ಎಫ್ ಸಿ.,
ಹಗರಿಬೊಮ್ಮನಹಳ್ಳಿ